ಕಾಲಿಟ್ಟಿದ್ದಾರೆ. ಹನ್ನೆರಡನೆಯ ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ. ಯೂನಿವರ್ಸಿಟಿಯ ಶಿಕ್ಷಣಕ್ಕಾಗಿ ಇಬ್ಬರು ಬೇರೆ ಬೇರೆ ಕರಿಯರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಲೂಸಿ ಎಕನಾಮಿಕ್ಸ್ ಮತ್ತು ಫೈನಾನ್ಸ್ ಆಯ್ಕೆ ಮಾಡಿಕೊಂಡಿದ್ದಾಳೆ. ಗ್ರೇಸಿ ಮೆಡಿಕಲ್ ಡಾಕ್ಟರ್ ಆಗಲು ಬಯಸುತ್ತಾಳೆ. ಅವರಿಬ್ಬರ ಜೀವನ ಬೇರೆ ಬೇರೆ ದಿಕ್ಕುಗಳಲ್ಲಿ ದೌಡಾಯಿಸುವುದರಲ್ಲಿದೆ, ಹೀಗಿರುವಾಗ ಇಬ್ಬರೊಂದಿಗಿರುವ ದೀರ್ಘ ಅವಕಾಶ ಭವಿಷ್ಯದಲ್ಲಿ ಲಭಿಸುವುದೋ ಇಲ್ಲವೋ! ಮಕ್ಕಳು ಎಷ್ಟು ಬೇಗನೆ ದೊಡ್ಡವರಾಗುತ್ತಾರೆಂದು ಯೋಚಿಸಿ ಆಶ್ಚರ್ಯಪಡುತ್ತೇನೆ. ನಾವು ಅವರ ಬಗ್ಗೆ ವ್ಯರ್ಥವಾಗಿ ಚಿಂತಿಸುತ್ತೇವೆ.

ಇಪ್ಪತ್ತಾರು, ಜೂನ್ ತಿಂಗಳಿನಿಂದ ನನ್ನ ಶಾಲೆಯ ರಜಾ ದಿನಗಳು ಆರಂಭಗೊಂಡವು. ನಾನು ಜೂನ್ ಇಪ್ಪತ್ತೆಂಟರಂದು ಲೂಫ್ಥಾನ್ಸಾ ಫ್ಲೈಟ್ ಹಿಡಿದು ಕೋಪನ್‌ಹೇಗನ್‌ನಿಂದ ಎಡಿನ್‌ಬರೊಗೆ ಹೋದೆ. ಏರ್‌ಪೋರ್ಟಿನಿಂದ ಹೊರಗೆ ಬಂದು ನೇರವಾಗಿ ಕಾರ್ ರೆಂಟಲ್ ಕಂಪನಿಯೆಡೆಗೆ ಹೋದೆ. ಸ್ಕಾಟ್ಲೆಂಡಿನಲ್ಲಿ ಅಲ್ಲಿ ಇಲ್ಲಿ ತಿರುಗಾಡಲು ಅನುಕೂಲವಾಗಲೆಂದು ಈ ರೆಂಟಲ್ ಕಾರನ್ನು ಬುಕ್ ಮಾಡಿಸಿದ್ದೆ.

ನಾನು ಏರ್‌ಪೋರ್ಟಿನಿಂದ ಪೀಟ್‌ನ ಮನೆಗೆ ಹೋದೆ. ಅವನು ನನ್ನ ಸ್ಕಾಟಿಷ್ ಡ್ಯಾನ್ಸ್ ಗ್ರೂಪಿನ ಗೆಳೆಯನಾಗಿದ್ದ. ಎಡಿನ್‌ಬರೊ ಬಂದಾಗಲೆಲ್ಲಾ ಅವನ ಮನೆಯಲ್ಲಿಯೇ ಉಳಿಯುತ್ತಿದ್ದೆ. ಪೀಟ್‌ನ ಹೆಂಡತಿ ನಿಧನಳಾಗಿದ್ದಳು. ಮೂವರು ಮಕ್ಕಳು ದೊಡ್ಡವರಾಗಿದ್ದರು. ಅವ ಅಜ್ಜನಾಗಿದ್ದ. ಪೀಟ್ ಹಾಸ್ಯಪ್ರಜ್ಞೆಯುಳ್ಳ ವ್ಯಕ್ತಿಯಾಗಿದ್ದ. ಅವನು, 'ನನ್ನ ಮಕ್ಕಳು ನನ್ನನ್ನು ಇಷ್ಟಪಡುವುದಿಲ್ಲ... ಏಕೆಂದರೆ ನಾನು ಅವರ ಮಕ್ಕಳ ಲಂಗೋಟಿಯನ್ನು ಬದಲಾಯಿಸುವುದಿಲ್ಲ, ಅವರ ಮಕ್ಕಳ ಬೇಬಿ ಸಿಟ್ಟಿಂಗ್ ಮಾಡುವುದಿಲ್ಲ. ನಾನು ಡ್ಯಾನ್ಸ್ ಮಾಡ್ತೀನಿ. ಮದ್ಯವನ್ನು ಸೇವಿಸುತ್ತೇನೆ. ಮಹಿಳೆಯರೊಂದಿಗೆ ಸುತ್ತಾಡುತ್ತೇನೆ... ಅದಕ್ಕೇ ಅವರು ನನ್ನಿಂದ ದೂರವಿರುತ್ತಾರೆ' ಎನ್ನುತ್ತಿದ್ದ. ಪೀಟ್ ಮಹಿಳೆಯರನ್ನು ಭೇಟಿಯಾಗುತ್ತಾನೆ, ಅನೇಕ ಬಾರಿ ಮಹಿಳೆಯರು ಅವನ ಮನೆಗೂ ಬಂದಿರುತ್ತಾರೆ, ಅವನೊಬ್ಬ ಜಾಲಿ ಮನುಷ್ಯ ಎಂಬುದು ನನಗೆ ತಿಳಿದಿತ್ತು. ಆದರೆ ನನಗೆ ಅವನ ವೈಯಕ್ತಿಕ ಜೀವನದ ಬಗ್ಗೆ ಆಸಕ್ತಿಯಿರಲಿಲ್ಲ. ನಾನು ಎಡಿನ್‌ಬರೊಗೆ ಬಂದಾಗಲೆಲ್ಲಾ ಅವನ ಮನೆ ನನಗಾಗಿ ತೆರೆದಿರುತ್ತದೆ. ನನಗೆ ಮತ್ತೇನು ಬೇಕು?

ಪೀಟ್ ನನಗೆ ಊಟ ಹಾಕುತ್ತಿದ್ದ; ಆದರೆ ಊಟ, ನಾನು ಅವನ ಮನೆಗೆ ಯಾವ ವೇಳೆಯಲ್ಲಿ ಹೋಗುತ್ತೇನೆ ಅಂದರೆ ಚಹಾದ ವೇಳೆಗೋ, ಲಂಚ್ ವೇಳೆಗೋ ಅಥವಾ ಡಿನ್ನರ್ ವೇಳೆಗೋ ಎಂಬುದನ್ನು ಅವಲಂಬಿಸಿರುತ್ತಿತ್ತು. ತದನಂತರದಲ್ಲಿ ನಾನೇ ಅವನ ಮನೆಯಲ್ಲಿ ಊಟ ತಿಂಡಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿತ್ತು. ನಾನು ಅವನಿಂದ ಇದಕ್ಕಿಂತ ಹೆಚ್ಚು ಅಪೇಕ್ಷಿಸುತ್ತಿರಲಿಲ್ಲ, ನಿರೀಕ್ಷಿಸುತ್ತಲೂ ಇರಲಿಲ್ಲ. ನಾನು ಸಂಜೆ ನಾಲ್ಕು ಗಂಟೆಗೆ ಅವನ ಮನೆಗೆ ಹೋದೆ. ಪೀಟ್ ನನಗೆ ಕಾಫಿಯನ್ನು ಮಾತ್ರ ಕೊಟ್ಟ.

ನಾನು ಎಡಿನ್‌ಬರೊನ ಕೆಲವು ಶಾಲೆಗಳಿಗೆ ನೌಕರಿಗಾಗಿ ಅರ್ಜಿಯನ್ನು ಹಾಕಿದ್ದೆ. ಮೂರು ಶಾಲೆಗಳಿಂದ ಸಂದರ್ಶನಕ್ಕೆ ಹಾಜರಾಗುವಂತೆ ಕರೆ ಬಂದಿತ್ತು. ಅಲ್ಲಿಗೆ ಹೋಗಿ ಸಂದರ್ಶನ ಕೊಟ್ಟು ಬಂದೆ. ಒಂದು ಸಂಸ್ಥೆಯ ಕಾರ್ಯಕ್ರಮದಲ್ಲಿ ನನ್ನ ಸ್ಕಾಟಿಷ್ ಡ್ಯಾನ್ಸ್ ಸಹ ಪ್ರಸ್ತುತಪಡಿಸಿದೆ. ನೃತ್ಯ ನನ್ನಲ್ಲಿ ಸ್ಫೂರ್ತಿಯನ್ನು ತುಂಬುತ್ತಿತ್ತು. ಅಭಿವ್ಯಕ್ತಿಯ ಈ ವಿಧಾನ ನನ್ನನ್ನು ಹಿಡಿದಿಡುತ್ತಿತ್ತು. ನೃತ್ಯದ ನಂತರ ಎಡಿನಬರೊಗೆ ಬಂದಿದ್ದು ಸಾರ್ಥಕವಾಯಿತು ಎಂದು ಅನ್ನಿಸಿತು.

ನಾವು ಸಮ್ಮರ್ ಹೌಸಿಗೆ ಹೋಗುವ ದಿನ ಸೌಂದ್ರಾ ಲೂಸಿ, ಗ್ರೇಸಿ ಮತ್ತು ಅಲಾನ್‌ನೊಂದಿಗೆ ಒಂದು ಪೆಟ್ರೋಲ್ ಪಂಪ್‌ಗೆ ಬಂದಳು. ನಮ್ಮ ಭೇಟಿಗೆ ಈ ಸ್ಥಳವನ್ನು ನಾವು ಮೊದಲೇ ನಿರ್ಧರಿಸಿದ್ದೆವು. ಅದು ಸಮ್ಮರ್ ಹೌಸ್‌ಗೆ ಹೋಗುವ ಮಾರ್ಗದಲ್ಲಿತ್ತು. ಅಲ್ಲಿಗೆ ಸೌಂದ್ರಾ ಬರುವುದು ಸಹ ಅನುಕೂಲಕರವಾಗಿತ್ತು.

ನಾವಿಬ್ಬರು ತುಂಬಾ ಶಿಷ್ಟತೆಯಿಂದ ಪರಸ್ಪರ ಭೇಟಿಯಾದವು. ಪರಸ್ಪರ 'ಹಲೊ' ಎಂದು ಹೇಳಿಕೊಂಡೆವು. ಕ್ಷೇಮಸಮಾಚಾರವನ್ನು ಸಹ ಕೇಳಿಕೊಂಡೆವು. ನಾನು ಸೌಂದ್ರಾಳೊಂದಿಗೆ ಮೂರು ವರ್ಷ ಹೇಗಿದ್ದೆ ಎಂದು ಯೋಚಿಸಿ ಆಶ್ಚರ್ಯವಾಗುತ್ತದೆ. ಆ ದಿನಗಳು ಎಲ್ಲಿ ಹೋದವು...? ಅವಳೀಗ ನನಗೆ ಅಪರಿಚಿತಳಂತೆ, ಪರಕೀಯಳಂತೆ ಕಾಣುತ್ತಾಳೆ.

ಸೌಂದ್ರಾಳ ಕಾರಿನಿಂದ ಮಕ್ಕಳು ಇಳಿದು ತಮ್ಮ ತಮ್ಮ ಸೂಟ್‌ಕೇಸ್ ಮತ್ತು ಬ್ಯಾಗಿನೊಂದಿಗೆ ಬಂದು ನನ್ನ ಕಾರಿನಲ್ಲಿ ಕೂತರು. ಎಲ್ಲರೂ ಉತ್ಸಾಹದಲ್ಲಿದ್ದರು. ತಮ್ಮ ತಾಯಿ ಸೌಂದ್ರಾಗೆ ಮಕ್ಕಳು ಟಾಟಾ ಮಾಡಿದರು, ಅವಳೆಡೆಗೆ ಫ್ಲೈಯಿಂಗ್ ಕಿಸ್ ಹರಿಸಿದರು. ನಂತರ ಔಪಚಾರಿಕವಾಗಿ ಹೇಳಿದರು, 'ವಿ ವಿಲ್ ಮಿಸ್ ಯೂ'!

ಸಮ್ಮರ್ ಹೌಸ್ ಎಡಿನ್‌ಬರೊ ಮುಖ್ಯ ನಗರದಿಂದ ಇಪ್ಪತ್ತು ಮೈಲು ದೂರದ ಸಮುದ್ರ ತೀರ ಗುಲ್ಲೇನ್ ದಡದಲ್ಲಿದೆ. ಆ ಪ್ರದೇಶ ದುಬಾರಿಯಾಗಿತ್ತು, ಆದರೆ ನಾನು ಹಣದ ಬಗ್ಗೆ ಯೋಚಿಸಲಿಲ್ಲ. ದೊಡ್ಡ ಲಿವಿಂಗ್‌ರೂಮ್, ಐದು ಬೆಡ್‌ರೂಮ್‌ಗಳು, ಕಿಚನ್, ಡೈನಿಂಗ್ ಹಾಲ್, ಲಾನ್, ಗಾರ್ಡನ್ ಎಲ್ಲವೂ ಸಮ್ಮರ್ ಹೌಸ್‌ನಲ್ಲಿದ್ದವು. ನಾವೆಲ್ಲರೂ ರೋಮಾಂಚನಗೊಂಡೆವು. ಮಕ್ಕಳು ಖುಷಿಯಿಂದ ಕುಣಿಯುತ್ತಾ ಕಾರಿನಿಂದಿಳಿದು, ತಮಗಿಷ್ಟವಾದ ಕೊಠಡಿಗಳನ್ನು ಆಯ್ಕೆ ಮಾಡಿಕೊಂಡು ಅವರವರ ಕೊಠಡಿಗಳಲ್ಲಿ ಲಗೇಜುಗಳನ್ನಿಟ್ಟರು. ನಾನು ಎಡಿನ್‌ಬರೊದಿಂದ ಸಾಕಷ್ಟು ತಿನ್ನುವ ವಸ್ತುಗಳನ್ನು ಖರೀದಿಸಿ ತಂದಿದ್ದೆ, ರೇಷನ್ ಸಹ ಖರೀದಿಸಿದ್ದೆ. ನಾನು ಅಡುಗೆ ಮನೆಯಲ್ಲಿ ರೇಷನ್ ಇಡಿಸಿ, ಮೊದಲು ಅಡುಗೆಗೆ ಸಿದ್ಧತೆ ಮಾಡಿಕೊಂಡೆ.

ನಾನು ಅಲಾನ್‌ನೊಂದಿಗೆ ಇಷ್ಟು ಸಮೀಪದಲ್ಲಿರುವುದು ಇದೇ ಮೊದಲ ಅವಕಾಶವಾಗಿತ್ತು. ಅವನು ಸೌಂದ್ರಾಳಂತೆಯೇ ಇದ್ದ; ವ್ಯತ್ಯಾಸವೆಂದರೆ, ಸೌಂದ್ರಾ ಹೆಣ್ಣಾಗಿದ್ದಳು, ಅಲಾನ್ ಗಂಡಾಗಿದ್ದ. ಅವನು ತಲೆಯೆತ್ತಿ ನನ್ನನ್ನು ನೋಡಿದಾಗ ನನ್ನ ಮನಸ್ಸು ಕುಣಿಯುತ್ತಿತ್ತು. ನನ್ನನ್ನು ಸೌಂದ್ರಾಳೇ ನೋಡುತ್ತಿದ್ದಾಳೆ ಎಂದು ಅನ್ನಿಸುತ್ತಿತ್ತು. ಅಲಾನ್ ಮೊದಲು ನನ್ನನ್ನು ನೋಡಿ ಹಿಂಜರಿಯುತ್ತಿದ್ದ, ಆದರೆ ನಂತರದಲ್ಲಿ ಖುಷಿಯಿಂದ ಕಲೆಯಲಾರಂಭಿಸಿದ. ನನಗೆ ಗಂಡು ಮಕ್ಕಳೊಂದಿಗಿರುವ ಅನುಭವವಿಲ್ಲ ಎಂಬುದನ್ನು ಗಮನಿಸಿದೆ. ನನಗೆ ನನ್ನ ಇಬ್ಬರು ಪುತ್ರಿಯರಿದ್ದಾರೆ; ನೀನಾಳಿಗೂ ಇಬ್ಬರು ಪುತ್ರಿಯರಿದ್ದಾರೆ. ಗಂಡು ಮಕ್ಕಳೊಂದಿಗೆ ಏನಾಗುತ್ತದೆ ಎಂಬುದನ್ನು ಅಲಾನ್ ನನಗೆ ತಿಳಿಯಪಡಿಸಿದ. ನನಗೆ ಅವನಿಂದ ಒಂದು ಶಕ್ತಿಯ ಅನುಭವವಾಯಿತು. ಅವನು ನನ್ನೊಂದಿಗೆ ಪುರುಷೋಚಿತ ಆಟವನ್ನು ಆಡುತ್ತಿದ್ದ. ನನ್ನ ಮಾತುಗಳನ್ನು ಗಮನವಿಟ್ಟು ಕೇಳುತ್ತಿದ್ದ. ಅವನೊಂದಿಗಿದ್ದಾಗ ಪರಿವಾರ ಪೂರ್ಣವಾಗಿದೆ ಎಂದು ಅನ್ನಿಸುತ್ತಿತ್ತು.

ಲೂಸಿ ಮತ್ತು ಗ್ರೇಸಿ ಅಲಾನನನ್ನು ಪ್ರೀತಿಸುತ್ತಾರೆ, ಅದರೊಂದಿಗೆ ತಮ್ಮ ದರ್ಪವನ್ನೂ ತೋರುತ್ತಾರೆ ಎಂಬುದನ್ನು ಮನಗಂಡೆ. ಅವರು ಅಕಾರಣವಾಗಿ ಅವನನ್ನು ಗದರಿಸುತ್ತಾರೆ. ಅಲಾನ್ ಓರ್ವ ಸರಳ, ಮುಗ್ಧ, ಶಿಷ್ಟಾಚಾರವುಳ್ಳ, ದೊಡ್ಡವರನ್ನು ಗೌರವಿಸುವಂಥ ಬಾಲಕನಾಗಿದ್ದು, ತನ್ನ ಸಹೋದರಿಯರಿಗೆ ಹೆದರುತ್ತಿದ್ದ. ನಾನು ಅಲಾನನೊಂದಿಗೆ ಒಂದು ಹೊಸ ಅನುಬಂಧದಲ್ಲಿ ಬಂಧಿಸಲ್ಪಡುತ್ತಿದ್ದೆ. ಲೂಸಿ ಮತ್ತು ಗ್ರೇಸಿ ಅವನಿಗೆ ತಮ್ಮ ದರ್ಪ ತೋರಿದಾಗ, ಅವನನ್ನು ಗದರಿಸಿದಾಗ ನಾನು ಅವನ ಪರ ವಹಿಸುತ್ತಿದ್ದೆ. ಆ ವೇಳೆಯಲ್ಲಿ ನಾನು ಮತ್ತು ಅಲಾನ್ ಪುರುಷರ ಪ್ರತಿನಿಧಿಗಳಾಗುತ್ತಿದ್ದೆವು, ಲೂಸಿ ಮತ್ತು ಗ್ರೇಸಿ ಮಹಿಳೆಯರ ಪ್ರತಿನಿಧಿಗಳಾಗುತ್ತಿದ್ದರು.

ಹನ್ನೆರಡು ವರ್ಷದ ಬಾಲಕನಾಗಿದ್ದ ಅಲಾನ್ ನನಗೆ ನನ್ನ ಬಾಲ್ಯವನ್ನು ನೆನಪಿಸುತ್ತಿದ್ದ. ಲೂಸಿ ಮತ್ತು ಗ್ರೇಸಿಯ ಜನನದ ದಿನಗಳು... ನನ್ನ ಅಮ್ಮ ಅವರು ಹುಟ್ಟುವ ವೇಳೆಯಲ್ಲಿ ನಮ್ಮ ಬಳಿಗೆ ಬಂದಿದ್ದರು. ಅಮ್ಮನೇ ನನ್ನ ಮಕ್ಕಳಿಗೆ ಲೂಸಿ ಮತ್ತು ಗ್ರೇಸಿ ಎಂದು ನಾಮಕರಣ ಮಾಡಿದ್ದಳು. ಸೌಂದ್ರಾ ಮತ್ತು ನಾನು ಇಬ್ಬರೂ ಮಕ್ಕಳನ್ನು ಎತ್ತಿಕೊಂಡು ಡಾಕ್ಟರರ ಬಳಿಗೆ ಹೋಗುತ್ತಿದ್ದೆವು. ಅವರ ಕಾಚಾಗಳನ್ನು ಬದಲಿಸುತ್ತಿದ್ದೆವು, ಅವರಿಗೆ ಹಾಲು ಕುಡಿಸುತ್ತಿದ್ದೆವು, ಅವರಿಗೆ ತೇಗು ಬರಿಸುತ್ತಿದ್ದೆವು... ಆದರೆ ಮಕ್ಕಳು ನಮ್ಮ ನಡುವೆ ತಕರಾರಿಗೆ ಕಾರಣರಾಗುತ್ತಿದ್ದರು.

ಇಬ್ಬರು ಅವಳಿ ಮಕ್ಕಳ ಜನನದ ಬಗ್ಗೆ, ತಾನೇನು ಕೈಚಳಕ ಮಾಡಿದೆ ಎಂದು ಸೌಂದ್ರಾ ಯೋಚಿಸುತ್ತಿದ್ದಳು. ಪ್ರಾಣಿ ಜಗತ್ತಿನ ಪ್ರತಿಯೊಂದು ಹೆಣ್ಣು, ಮರಿಗಳಿಗೆ ಜನ್ಮ ಕೊಟ್ಟು ತನ್ನ ಪ್ರಜಾತಿಯನ್ನು ಮುಂದುವರೆಸುತ್ತದೆ. ಹೀಗೆ ತಾನೂ ಸಹ ಒಂದು ಅದ್ಭುತ ಕಾರ್ಯವೆಸಗಿದೆ ಎಂದು ಸೌಂದ್ರಾ ಯೋಚಿಸುತ್ತಿದ್ದಳು. ಅವಳು ಮಕ್ಕಳ ಜನನದ ನಂತರ ಸಂಪೂರ್ಣ ಬದಲಾಗಿದ್ದಳು. ಮನೆಯ ಒಳಗಿನ ಹೊರಗಿನ ಎಲ್ಲಾ ಕೆಲಸಗಳನ್ನು ನಾನೇ ಮಾಡಬೇಕಿತ್ತು.